## ಧಾರವಾಡ ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿಗಳು

607 (998) ಶ್ರೀ ಬೆಲ್ಲದ ಚಂದ್ರಕಾಂತ್ ಗುರಪ್ಪ (ಧಾರವಾಡ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ಲೋಕೋಪಯೋಗಿ ಇಲಾಖೆ ಅಡಿ ಬರುವ ವಿವಿಧ ಪ್ರಕಾರದ ರಸ್ತೆಗಳು ಎಷ್ಟು; ಅವುಗಳ ಉದ್ದ ಎಷ್ಟು (ಕಿಮೀಗಳ ವಿವರ ನೀಡುವುದು);

ಆ) ಧಾರವಾಡ ಜಿಲ್ಲೆಯ ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಯ ಜಿಲ್ಲಾ ರಸ್ತೆ ಇತ್ಯಾದಿಗಳಿಗೆ ಕಳೆದ ಮೂರು ವರ್ಷಗಳಲ್ಲಿ ನಿಗಧಿಪಡಿಸಿದ್ದ ಹಾಗೂ ಖರ್ಚು ಮಾಡಿದ ಹಣವೆಷ್ಟು;

ಇ) ಈ ಸಾಲಿನಲ್ಲಿ ಯಾವಯಾವ ರಸ್ತೆಗಳಿಗೆ ಎಷ್ಟೆಷ್ಟು ಹಣ ನಿಗಧಿಪಡಿಸಿದೆ ಹಾಗೂ ದಿನಾಂಕ:30-3-2003ರ ಒಳಗೆ ಎಷ್ಟು ಹಣ ವೆಚ್ಚವಾಗಿದೆ; (ತಾಲ್ಲೂಕು, ಜಿಲ್ಲಾಪಂಚಾಯಿತಿ ಮತ್ತು ಲೋಕೋಪಯೋಗಿ ಮತ್ತು ರಾಷ್ಟ್ರೀಯ ಹೆದ್ದಾರಿಯ ವೆಚ್ಚದ ವಿವರಗಳನ್ನು ಹಿಂದಿನ ಮೂರು ವರ್ಷದ ವಿವರ ಸಹಿತ ನೀಡುವುದು)?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ) ರಾಜ್ಯದಲ್ಲಿ ಲೋಕೋಪಯೋಗಿ ಇಲಾಖೆ ಅಡಿಯಲ್ಲಿ ರಾಷ್ಟ್ರೀಯ ಹೆದ್ದಾರಿ ರಾಜ್ಯ ಹೆದ್ದಾರಿ ಹಾಗೂ ಜಿಲ್ಲಾ ಮುಖ್ಯ ರಸ್ತೆಗಳು ಇರುತ್ತವೆ.

(ರೂ. ಲಕ್ಷಗಳಲ್ಲಿ)

| ಕ್ರ.ಸಂ | ರಸ್ತೆಯ ಪ್ರಕಾರ | ಉದ್ದ (ಕಿ.ಮೀಗಳಲ್ಲಿ) |
|---|---|---|
| 1. | ರಾಷ್ಟ್ರೀಯ ಹೆದ್ದಾರಿ | 3728 |
| 2. | ರಾಜ್ಯ ಹೆದ್ದಾರಿ | 9829 |
| 3. | ಜಿಲ್ಲಾ ಮುಖ್ಯ ರಸ್ತೆ | 28247 |

ಆ) ಧಾರವಾಡ ಜಿಲ್ಲೆಯ ಕಳೆದ ಮೂರು ವರ್ಷಗಳಲ್ಲಿ ರಾಷ್ಟ್ರೀಯ ಹೆದ್ದಾರಿ ರಾಜ್ಯ ಹೆದ್ದಾರಿ ಹಾಗೂ ಜಿಲ್ಲಾ ಮುಖ್ಯ ರಸ್ತೆಗಳ ನಿರ್ವಹಣೆ ಮತ್ತು ದುರಸ್ತಿಗಾಗಿ ನಿಗಧಿಪಡಿಸಿದ ಹಣ ಹಾಗೂ ಖರ್ಚು ಮಾಡಿದ ಹಣದ ವಿವರಗಳು ಈ ಕೆಳಗಿನಂತೆ ಇವೆ.

| ಕ್ರ. | ವರ್ಷ | ರಾಷ್ಟ್ರೀಯ | | ರಾಜ್ಯ ಹೆದ್ದಾರಿ | | ಜಿಲ್ಲಾ ಮುಖ್ಯ | |
|---|---|---|---|---|---|---|---|
| ಸಂ. | | ಹೆದ್ದಾರಿ | | | | ರಸ್ತೆ | |
| 1 | 2000-01 | 7.30 | 7.20 | 52.58 | 87.30 | 264.04 | 264.86 |
| 2 | 2001-02 | 36.00 | 35.40 | 20.05 | 17.59 | 173.10 | 158.58 |
| 3. | 2002-03 | 370.00 | 75.50 | 1.00 | 22.22 | 443.55 | 179.79 |

ಇ) ಲೋಕೋಪಯೋಗಿ ಇಲಾಖೆಗೆ ಸಂಬಂಧಿಸಿದ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.

## ಅನುಬಂಧ
## (ಧಾರವಾಡ ಜಿಲ್ಲೆಗೆ ಸಂಬಂಧಿಸಿದ ಅನುದಾನ - ವೆಚ್ಚ)
## ಸಂಪರ್ಕ ಮತ್ತು ಕಟ್ಟಡ (ಉತ್ತರ) ವಲಯ

| ಕ್ರ.ಸಂ | ಲೆಕ್ಕ ಶೀರ್ಷಿಕೆ | 1999-2000 | | 2000-2001 | | 2001-2002 | | 2002-03 (1/2003ರ ಅಂತ್ಯದವರೆಗೆ | |
|---|---|---|---|---|---|---|---|---|---|
| | | ಅನುದಾನ | ವೆಚ್ಚ | ಅನುದಾನ | ವೆಚ್ಚ | ಅನುದಾನ | ವೆಚ್ಚ | ಅನುದಾನ | ವೆಚ್ಚ |
| 1. | 5054 ರಸ್ತೆ ಮತ್ತು ಸೇತುವೆ (ಯೋಜನೆ) | 11.75 | 19.75 | 201.00 | 79.14 | 131,46 | 103,47 | | 1.50 |
| 2. | 5054 ನಬಾರ್ಡ್ ಸಹಕಾರ | 243.33 | 243.33 | 228.00 | 207.03 | 435.43 | 516.49 | 310.61 | 310.61 |
| 3. | ಕೇಂದ್ರ ರಸ್ತೆ ನಿಧಿ | - | - | - | | - | - | 161.87 | 126.11 |
| 4. | 3154 ರಸ್ತೆ ಮತ್ತು ಸೇತುವೆ | 398.94 | 273.44 | 316.62 | 352.16 | 192.15 | 176.17 | 244.55 | 204.01 |
| | ಒಟ್ಟು | 654.02 | 536.52 | 745.62 | 638.33 | 759.04 | 796.13 | 717.03 | 642.23 |

### ರಾಷ್ಟ್ರೀಯ ಹೆದ್ದಾರಿ ವಲಯ
### ಅನುದಾನ ಹಾಗೂ ಆಗಿರುವ ಖರ್ಚು

| ರಾ.ಹೆ. ಸಂಖ್ಯೆ | ಅನುದಾನ | ಖರ್ಚು (28-2-03 ರವರೆಗೆ) |
|---|---|---|
| 218 | 347.01 | 69.00 |
| 63 | 24.39 | 6.50 |